# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **568**

ಸದಸ್ಯರ ಹೆಸರು : ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 24-09-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

**

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿದ್ಯುತ್ ಗೆ ಒಟ್ಟು ಎಷ್ಟು ಬೇಡಿಕೆಯಿದೆ; ಪ್ರಸ್ತುತ ರಾಜ್ಯದಲ್ಲಿ ಉತ್ಪಾದಿಸುತ್ತಿರುವ ವಿದ್ಯುತ್ ನ ಪ್ರಮಾಣವೆಷ್ಟು; | ಪ್ರಸಕ್ತ ಸಾಲಿನಲ್ಲಿ, ರಾಜ್ಯದಲ್ಲಿ ದಿನವಹಿ ಸರಾಸರಿ ವಿದ್ಯುತ್ ಬೇಡಿಕೆಯು 221 ದಶಲಕ್ಷ ಯೂನಿಟ್ ಗಳಾಗಿದ್ದು, ಬೇಡಿಕೆ ಪ್ರಮಾಣದಷ್ಟು ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ.<br>2019-20ನೇ ಸಾಲಿನಲ್ಲಿ ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣ 75128.19 ದಶಲಕ್ಷ ಯೂನಿಟ್ಟುಗಳಾಗಿದ್ದು, ಪ್ರಸಕ್ತ ಸಾಲಿನಲ್ಲಿ 1-4-2020 ರಿಂದ 22-9-2020 ರವರೆಗೆ ಒಟ್ಟು 30,611 (ತಾತ್ಕಾಲಿಕ) ದಶಲಕ್ಷ ಯೂನಿಟ್ ಗಳಷ್ಟು ವಿದ್ಯುತ್ ಲಭ್ಯವಾಗಿರುತ್ತದೆ. |
| ಆ) | ಸರ್ಕಾರದ ವತಿಯಿಂದ ಹೊಸ ಇಂಧನ ಉತ್ಪಾದನೆ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಇದಕ್ಕಾಗಿ ತಗಲುವ ವೆಚ್ಚವೆಷ್ಟು; | ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ರಾಮನಗರ ಜಿಲ್ಲೆಯ ಬಿಡದಿಯಲ್ಲಿ 1X11.5 ಮೆ.ವ್ಯಾ ಸಾಮರ್ಥ್ಯದ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಮಾಡುವ ವಿದ್ಯುತ್ ಕೇಂದ್ರವನ್ನು ಸುಮಾರು 260.00 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲು ಯೋಜಿಸಲಾಗಿದೆ. |
| ಇ) | ನೆರೆ ರಾಜ್ಯಗಳಿಂದ ವಿದ್ಯುತ್ ಖರೀದಿಸಲು ತಗಲುವ ವೆಚ್ಚವೆಷ್ಟು; ಪ್ರತಿ ವರ್ಷ ಎಷ್ಟು ವಿದ್ಯುತ್ ನ್ನು ಖರೀದಿಸಲಾಗುತ್ತಿದೆ; ಪ್ರತಿ ಯೂನಿಟ್ ಗೆ ವಿಧಿಸಿದ ದರವೆಷ್ಟು? (ವಿವರ ನೀಡುವುದು) | ರಾಜ್ಯವು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿರುವುದರಿಂದ 2019-20ನೇ ಸಾಲಿನಿಂದ ಇಲ್ಲಿಯವರೆಗೆ ಹೊರರಾಜ್ಯಗಳಿಂದ ವಿದ್ಯುತ್ತನ್ನು ಖರೀದಿ ಮಾಡಿರುವುದಿಲ್ಲ. |

**ಸಂಖ್ಯೆ:** ಎನರ್ಜಿ 189 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ